# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.02 | Issue. 04 | Pages. 2 | Date: 27-11-2025, THURSDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 04 - ಪುಟಗಳು : 2 27-11-2025 ಗುರುವಾರ Ph: 8762954248 ದರ : ₹1


# ಸಂವಿಧಾನ ದೇಶದ ಅದ್ಭುತ ಗ್ರಂಥ: ಸಂಸದ ಶ್ರೇಯಸ್

## ಜಿಲ್ಲಾದ್ಯಂತ ಅರ್ಥಪೂರ್ಣ ಸಂವಿಧಾನ ದಿನ | ಆಕರ್ಷಕ ಮೆರವಣಿಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಂವಿಧಾನ ಪುಸ್ತಕ ಅತ್ಯದ್ಭುತವಾದ ಗ್ರಂಥವಾಗಿದೆ. ಅದಕ್ಕೆ ಸಮಾನವಾದ ಗ್ರಂಥ ಮತ್ತೊಂದಿಲ್ಲ. ಹಾಗಾಗಿ ಶಾಲೆಗಳಲ್ಲಿ ಮಕ್ಕಳಿಗೆ ಪ್ರತಿದಿನ ಸಂವಿಧಾನದ ಕುರಿತು ಒಂದು ಪುಟವನ್ನಾದರೂ ಓದಿಸಿ ಅದರ ಮಹತ್ವದ ಕುರಿತು ವಿವರಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದರು.




ಜಿಲ್ಲಾಡಳಿತದಿಂದ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ನಾವೆಲ್ಲರೂ ತಂದೆ-ತಾಯಿ, ಗುರು-ಹಿರಿಯರಿಗೆ ಕೊಡುವ ಗೌರವವನ್ನು ಸಂವಿಧಾನದ ಪೀಠಿಕೆ ಹಾಗೂ ಸಂವಿಧಾನ ಪುಸ್ತಕಕ್ಕೂ ಕೊಡಬೇಕು. ಸಂವಿಧಾನದ ಪೀಠಿಕೆಯನ್ನು ಬಾಯಿಪಾಠ ಮಾಡಿಕೊಳ್ಳಬೇಕು. ಅದು ನಮ್ಮೆಲ್ಲರ ಜವಾಬ್ದಾರಿ. ದೈನಂದಿನ ದಿನಚರಿಯಲ್ಲಿ ಆಹಾರ ಎಷ್ಟು ಅಗತ್ಯವೋ ಹಾಗೆಯೇ ನಮ್ಮ ಸಂವಿಧಾನವು ನಮಗೆ ಅಷ್ಟೇ ಅಗತ್ಯವಾಗಿದೆ ಎಂದು ತಿಳಿಸಿದರು.

ಸಂವಿಧಾನವನ್ನು ನಾವೆಲ್ಲರೂ ಓದುವುದಷ್ಟೇ ಅಲ್ಲದೆ ಪೋಷಕರಿಗೆ ಹಾಗೂ ಮುಂದಿನ ಪೀಳಿಗೆಗೆ ಸಂವಿಧಾನದ ಕುರಿತು ತಿಳಿ ಹೇಳುವುದರ ಮೂಲಕ ಸಮಾಜವನ್ನು ಕಟ್ಟುವ ಕೆಲಸ ಮಾಡುವುದು ಇಂದಿನ ಮಕ್ಕಳ ಜವಾಬ್ದಾರಿ. ಸಂವಿಧಾನದ ತತ್ವಗಳನ್ನು ನಾವುಗಳು ಅಳವಡಿಸಿಕೊಳ್ಳುವುದರ ಮೂಲಕ ಸಂವಿಧಾನ ರಕ್ಷಣೆ ಮಾಡಬೇಕು ಎಂದರು.

### ದೇಶದ ಜೀವಾಳ ಸಂವಿಧಾನ

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ದೇಶವು ಮೊದಲು ಪರಕೀಯರ ಆಳ್ವಿಕೆಯಲ್ಲಿತ್ತು. 1947 ರಲ್ಲಿ ಅವರಿಂದ ಮುಕ್ತಿಯನ್ನು ಹೊಂದಲಾಯಿತು. ಆದರೆ ನಮ್ಮ ಸಂವಿಧಾನವನ್ನು ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲೇ 1946 ರಲ್ಲಿಯೇ ಸಂವಿಧಾನ ರಚಿಸಲು ಪ್ರಾರಂಭಿಸಲಾಯಿತು. 1949ರ ನ. 26 ರಂದು ಸಂವಿಧಾನವನ್ನು ಅಂಗೀಕರಿಸಿಕೊಂಡೆವು ಎಂದು ತಿಳಿಸಿದರು.

ನಮ್ಮ ದೇಶವು 560 ಕ್ಕಿಂತ ಹೆಚ್ಚಿನ ಭಾಗಗಳಾಗಿ ವಿಂಗಡಣೆಯಾಗಿತ್ತು, ಇವುಗಳನ್ನು ಒಗ್ಗೂಡಿಸಿ ಭೌತಿಕವಾಗಿ ಒಂದು ದೇಶವನ್ನು ರಚಿಸಿ ಭಾರತ ಎಂದು ಗುರುತು ಕೊಡಲಾಯಿತು. ನಮ್ಮ ದೇಶದ ಜೀವಾಳ ಸಂವಿಧಾನವಾಗಿದೆ. ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಯಾವಾಗಲೂ ಜೊತೆ ಜೊತೆಯಾಗಿಯೇ ಇರುತ್ತವೆ. ಇವುಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಹಾಗಾಗಿ ನಮ್ಮ ಸಂವಿಧಾನದ ಕುರಿತು ನಾವು ತಿಳಿದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಎಂದರು.

ನಮ್ಮ ಸಂವಿಧಾನವು ಅನೇಕ ವಿಶೇಷತೆಗಳಿಂದ ಕೂಡಿದೆ. ನಾವು ಯಾವ ರೀತಿ ಇರಬೇಕು, ಯಾವ ರೀತಿ ಜೀವನ ಮಾಡಬೇಕು ಎಂಬ ಎಲ್ಲಾ ಅಂಶಗಳನ್ನು ತಿಳಿಸುತ್ತದೆ. ಜೊತೆಗೆ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದನ್ನು ತಿಳಿಸುತ್ತದೆ. ವೈವಿಧ್ಯಮಯವಾದ ದೇಶ ನಮ್ಮದು. ಆ ವೈವಿಧ್ಯತೆಯೆ ನಮ್ಮ ಗುರುತಾಗಿದೆ. ಪ್ರತಿಯೊಬ್ಬರೂ ಸಂವಿಧಾನವನ್ನು ಓದಬೇಕು ಜೊತೆಗೆ ಆ ಸಂವಿಧಾನದ ಚೌಕಟ್ಟಿನಲ್ಲಿ ಬದುಕಬೇಕು ಎಂದರು.





ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ ಸಂವಿಧಾನವನ್ನು ಓದುವುದು, ತಿಳಿಯುವುದು ಅಷ್ಟೇ ಅಲ್ಲ. ಅದನ್ನು ಸಂರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ಅದರಿಂದ ನಮ್ಮ ರಕ್ಷಣೆಯೂ ಆಗುತ್ತದೆ. ತಳ ಸಮುದಾಯದ ಜನರಿಗೂ ಗಾಳಿ, ನೀರು, ಬೆಳಕು ದೊರಕುತ್ತಿದೆ ಎಂದರೆ ಅದು ಡಾ. ಬಿ.ಆರ್.ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದಿಂದ ಆಗಿದೆ ಎಂದು ತಿಳಿಸಿದರು.

ಇಂತಹ ಮಹತ್ವದ ದಿನಾಚರಣೆಗಳಿಗೆ ಎಲ್ಲಾ ಸಮುದಾಯದ ಜನರು ಭಾಗವಹಿಸಬೇಕು. ಸಂವಿಧಾನದ ಮೂಲಕ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ನೀಡಲಾಗಿದೆ. ಪ್ರತಿಯೊಬ್ಬರಿಗೂ ನ್ಯಾಯವನ್ನು ಒದಗಿಸಿದ್ದು ಸಂವಿಧಾನವಾಗಿದೆ. ನಾವುಗಳು ಎಲ್ಲೇ ಇದ್ದರೂ, ಎಲ್ಲೇ ವಿದ್ಯಾಭ್ಯಾಸ, ಕೆಲಸ ಮಾಡಿದರೂ ನಮ್ಮ ಸಂವಿಧಾನವನ್ನು ಮರೆಯಬಾರದು. ಎಲ್ಲಾ ರೀತಿಯರಂಗದವರಿಗೂ ಮೀಸಲಾತಿ ಸಿಕ್ಕಿದೆ ಎಂದರೆ, ಅದು ಸಂವಿಧಾನದಿಂದ ಇಂದು ಮೀಸಲಾತಿಯಿಂದ ನಾವುಗಳು ಉತ್ತಮ ಸ್ಥಾನದಲ್ಲಿದ್ದೇವೆ ಹಾಗಾಗಿ ಸಂವಿಧಾನದ ಬಗ್ಗೆ ಶಾಲೆಗಳಲ್ಲಿ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಸಂವಿಧಾನದ ಕುರಿತು ಅರಿವು ಮೂಡಿಸಬೇಕು ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್ .ಪೂರ್ಣಿಮಾ ಸಂವಿಧಾನದ ಪೀಠಿಕೆ ಬೋಧಿಸಿದರು.

ಜಿಲ್ಲಾಧಿಕಾರಿ ಕಚೇರಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಭವನದ ವರೆಗೆ ಮೆರವಣಿಗೆ ನಡೆಯಿತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ದೂದ್ ಪೀರ್ ಮತ್ತಿತರರು ಉಪಸ್ಥಿತರಿದ್ದರು.

## ಸಂವಿಧಾನದಿಂದ ಸರ್ವರಿಗೂ ಸಮಾನತೆ ಉಪವಿಭಾಗಧಿಕಾರಿ ರಾಜೇಶ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮಕ್ಕಳಿಗೆ ಬಾಲ್ಯದಿಂದಲೇ ಸಂವಿಧಾನದ ಕುರಿತು ಅರಿವು ಮೂಡಿಸಬೇಕಾದ ಅವಶ್ಯಕತೆ ಇದೆ ಎಂದು ಉಪವಿಭಾಗಾಧಿಕಾರಿ ರಾಜೇಶ್ ಹೇಳಿದರು.

ಸಂವಿಧಾನ ದಿನಾಚರಣೆಯ ಅಂಗವಾಗಿ ತಾ.ಪಂ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸತತ ಪರಿಶ್ರಮದಿಂದ ಜಗತ್ತಿನಲ್ಲೇ ಅತಿ ದೊಡ್ಡ ಸಂವಿಧಾನ ಭಾರತ ದೇಶದಲ್ಲಿ ರಚನೆಯಾಯಿತು. ಸಂವಿಧಾನ ಕರಡು ರಚನಾ ಸಮಿತಿಯಲ್ಲಿ ಒಟ್ಟು 7 ಜನ ಸದಸ್ಯರಿದ್ದು ಎಲ್ಲರೂ ವಿವಿಧ ಕಾರಣಗಳಿಂದ ಹುದ್ದೆಯನ್ನು ತೊರೆದರೆ ಅಂಬೇಡ್ಕರ್ ಒಬ್ಬರು ಮಾತ್ರ ಸಮಿತಿಯಲ್ಲಿ ಉಳಿದು ದೇಶ ವಿದೇಶ ಗಳಲ್ಲಿ ಅಧ್ಯಯನ ಮಾಡಿ ಮಹತ್ವದ ಸಂವಿಧಾನ ರಚಿಸಿದರು. ಸಂವಿಧಾನ ಇಂದು ಇಲ್ಲದಿದ್ದರೆ ರಾಜ ಮಹಾರಾಜರು, ಜಾತಿಯ ಆಧಾರದಲ್ಲಿ ಆಡಳಿತ ನಡೆಯುತ್ತಿತ್ತು.

ಇದರಿಂದ ಸಮಾನತೆ ಎಲ್ಲರಿಗೂ ದೊರಕುವುದು ಅಸಾಧ್ಯ ವಾಗಿತ್ತು. ಆದರೆ ಬಾಬಾ ಸಾಹೇಬ್ ಅಂಬೇಡ್ಕರ್‌ವರು ಅಧ್ಯಯನ ಮಾಡಿ ಸಂವಿಧಾನ ರಚನೆ ಮಾಡಿದರು. ಇದರಿಂದ ದೇಶದ ಪ್ರತಿಯೊಬ್ಬರಿಗೂ ಸಮಾನತೆ ಹಕ್ಕು, ವಾಕ್ ಸ್ವಾತಂತ್ರ ಹಕ್ಕು, ಸೇರಿದಂತೆ ಇತರ ಹಕ್ಕುಗಳು ದೊರಕುವಂತಾಯಿತು. ಸಂವಿಧಾನ ಇಲ್ಲದಿದ್ದಲ್ಲಿ

ಬಲಡ್ಯಾರು ಹೇಳಿದಂತೆ ಕೇಳಬೇಕಾಗಿತ್ತು.ಸಂವಿಧಾನ ದಿಂದ ಬದಲಾವಣೆ ಎಲ್ಲಾ ವಲಯದಲ್ಲೂ ಉಂಟಾಗಿದ್ದು ಅಸ್ಪೃಶ್ಯತೆ ಮರೆಯಾಗಲು ಅಂಬೇಡ್ಕ ರ್ ರವರ ಸಂವಿಧಾನ ಪ್ರಮುಖ ಕಾರಣವಾಗಿದೆ. ನಾವು ಹೇಳೋದೊಂದು ಮಾಡೋದೊಂದು ಆಗಬಾರದು. ಇತ್ತೀಚಿಗೆ ಶಾಲೆಗಳಲ್ಲಿ ಕಾಲೇಜು ಗಳಲ್ಲಿ ಸಂವಿಧಾನ ಕುರಿತು ಜಾಗೃತಿ ಮೂಡಿಸಲಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದರು.

ಉಪನ್ಯಾಸಕ ಸ್ವಾಮಿ ಮಾತನಾಡಿ, ಭಾರತದ ಸಂವಿಧಾನ ಜಗತ್ತಿನಲ್ಲೆ ವಿಶೇಷವಾಗಿದೆ.

ಪ್ರತಿಯೊಬ್ಬರಿಗೂ ಸಮಾನವಾದ ಅವಕಾಶವನ್ನು ಎಲ್ಲಾ ವಲಯದಲ್ಲಿ ಕೊಟ್ಟಿರುವುದು ನಮ್ಮ ಸಂವಿಧಾನ ಎಂದರು.

ಕಾರ್ಯಕ್ರಮದ ಅಂಗವಾಗಿ ಅಂಬೇಡ್ಕರ್ ರವರ ಭಾವ ಚಿತ್ರ ಹಾಗೂ ಸಂವಿಧಾನದ ಪ್ರತಿಯ ಚಿತ್ರವನ್ನು ತೆರೆದ ವಾಹನದಲ್ಲಿಟ್ಟು ಕಾಲೇಜು ವಿದ್ಯಾರ್ಥಿಗಳ ಸಹಯೋಗದಲ್ಲಿ ಪಟ್ಟಣದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಸುಪ್ರೀತಾ, ತಾಲೂಕು ಪಂಚಾಯಿತಿ ಇ.ಓ ಗಂಗಾಧರ್, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ತಮಣ್ಣ ಶೆಟ್ಟಿ, ತಾ.ಪಂ ಸಹಾಯಕ ನಿರ್ದೇಶಕ ಆದಿತ್ಯ, ಸಮಾಜ ಕಲ್ಯಾಣಾಧಿಕಾರಿ ಮೋಹನ್ ಸೇರಿದಂತೆ ಇತರರು ಹಾಜರಿದ್ದರು.

## ಮುಖ್ಯಮಂತ್ರಿ ಕಾರ್ಯಕ್ರಮ ಯಶಸ್ಸಿಗೆ ಸಂಸದರ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಡಿ. 6 ರಂದು ಹಾಸನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಲಿದ್ದು ಕಾರ್ಯಕ್ರಮ ಯಶಸ್ಸಿಗೆ ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.



ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಅಧಿಕಾರಿಗಳು ತಮ್ಮ ಜವಾಬ್ದಾರಿ ಚಾಚು ತಪ್ಪದೆ ನಿರ್ವಹಿಸಬೇಕು. ಕೇಂದ್ರ ಸ್ಥಾನ ಬಿಡಲು ಜಿಲ್ಲಾಧಿಕಾರಿ ಅವರ ಪೂರ್ವಾನುಮತಿ ಪಡೆಯಬೇಕು ಎಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಕಾರ್ಯಕ್ರಮದ ಹಿನ್ನೆಲೆಯಲ್ಲಿ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ತಮ್ಮ ವ್ಯಾಪ್ತಿಯಲ್ಲಿ ಸಿದ್ಧತೆ ಮಾಡಿಕೊಂಡು ಎಲ್ಲರೂ ಒಂದು ತಂಡವಾಗಿ ಸಮನ್ವಯತೆಯಿಂದ ಕೆಲಸ ಮಾಡುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಾರ್ಯಕ್ರಮಕ್ಕೆ ವಿವಿಧ ಸಚಿವರು ಆಗಮಿಸುವುದರಿಂದ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರು ಲೈಸನ್ ಅಧಿಕಾರಿಯಾಗಿರುತ್ತಾರೆ. ಶಿಷ್ಟಾಚಾರದಲ್ಲಿ ಯಾವುದೇ ನ್ಯೂನ್ಯತೆ ಆಗದಂತೆ ಎಚ್ಚರವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳು ಯಾವುದೇ ನಿರ್ಧಾರ ತೆಗೆದುಕೊಳ್ಳು ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಮ್ಮೆ ತನ್ನಿ ಎಂದರಲ್ಲದೆ, ಸಣ್ಣ ಸಣ್ಣ ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಯಾವುದೇ ಲೋಪದೋಷ ಉಂಟಾಗದಂತೆ ಜವಾಬ್ದಾರಿಯಿಂದ ಅಚ್ಚುಕಟ್ಟಾಗಿ ಸಿದ್ಧತೆ ಮಾಡಿಕೊಳ್ಳಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ವಾಹನ ದಟ್ಟಣೆ ನಿಯಂತ್ರಣ ಹಾಗೂ ವಾಹನ ನಿಲುಗಡೆಗೆ ನಿರ್ದಿಷ್ಟ ಸ್ಥಳ ಗುರುತಿಸಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಸೈನೇಜ್ ಬೋರ್ಡ್ ಹಾಕಬೇಕು. ಸುಸಜ್ಜಿತ ಅಂಬುಲೆನ್ಸ್ ವ್ಯವಸ್ಥೆ ಮಾಡಿಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರಿಗೆ ಸೂಚಿಸಿದರಲ್ಲದೆ ಪ್ರಾಥಮಿಕ ಚಿಕಿತ್ಸೆಗೆ ಅಗತ್ಯ ಸಿದ್ಧತೆಗೆ ಕ್ರಮವಹಿಸಲು ಸೂಚಿಸಿದರು.

ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡಿ, ವ್ಯವಸ್ಥಿತವಾಗಿ ಕಸದ ಬುಟ್ಟಿಗಳನ್ನು ಇಡುವಂತೆ ಸೂಚಿಸಿದರಲ್ಲದೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು ಜೊತೆಗೆ ಕಸದ ಉತ್ಪಾದನೆ ಕಡಿಮೆ ಮಾಡಲು ಕೂಡ ಗಮನಹರಿಸಿ ಪರಿಸರ ಸ್ನೇಹಿ ಕಾರ್ಯಕ್ರಮ ಮಾಡಲು ಸಹಕರಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರನ್ನು ಸ್ವಾಗತಿಸುವ ಹಂತದಿಂದ ಅವರನ್ನು ಬೀಳ್ಕೊಡುವವರೆಗೆ ಪ್ರತಿ ಹಂತದಲ್ಲೂ ವಿಡಿಯೋ ಮತ್ತು ಛಾಯಾಚಿತ್ರ ತೆಗೆಯಲು ಒಂದು ತಂಡ ನೇಮಿಸಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಾರ್ಯಕ್ರಮಕ್ಕೆ ಆಗಮಿಸುವ ಫಲಾನುಭವಿಗಳ ಹೆಸರು, ಮೊಬೈಲ್ ನಂಬರ್, ಗ್ರಾಮದ ಹೆಸರಿನೊಂದಿಗೆ ಪಟ್ಟಿ ತಯಾರಿಸಿ ಒಂದು ಬಸ್‌ಗೆ ಒಬ್ಬರು ನೋಡಲ್ ಆಫೀಸರ್ ನೇಮಿಸಿ ಅವರ ಸಂಪರ್ಕ ಸಂಖ್ಯೆ ನೀಡಬೇಕು ವಾಟ್ಸ್ ಪ್ ಗ್ರೂಪ್ ಮಾಡಿ ಎಂದು ಸೂಚಿಸಿದರಲ್ಲದೆ ಬಸ್ ನಂಬರ್ ಮತ್ತು ಚಾಲಕನ ಮೊಬೈಲ್ ನಂಬರ್ ಶೇರ್ ಮಾಡಬೇಕು, ಬಸ್ ಹೊರಟ ತಕ್ಷಣ ಗ್ರೂಪ್‌ಗೆ ಪೋಟೋ ಹಾಕಬೇಕು ಎಂದು ತಿಳಿಸಿದರು.

ಇಲಾಖೆವಾರು ಸ್ಟಾಲ್ ಹಾಕಲು ಸಿದ್ದತೆ ಮಾಡಿಕೊಳ್ಳಲು ಸೂಚಿಸಿದರಲ್ಲದೆ,ಕಾರ್ಯಕ್ರಮದ ಉದ್ದೇಶ ಮತ್ತು ಮಾಹಿತಿ ನೀಡಲು ಕಿರು ಹೊತ್ತಿಗೆ ಬಿಡುಗಡೆಗೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್ .ಪೂರ್ಣಿಮಾ ಮಾತನಾಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಂಜುನಾಥ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳಾದ ಬಾಬು, ಕೃಷ್ಣ ಮೂರ್ತಿ, ಉಪ ವಿಭಾಗಾಧಿಕಾರಿಗಳಾದ ಜಗದೀಶ್ ಗಂಗಣ್ಣನವರ್, ರಾಜೇಶ್ ಹಾಗೂ ಇತರರಿದ್ದರು.

## ಡಿ.ಕೆ. ಶಿವಕುಮಾರ್ ಸೇವೆ ಪರಿಗಣಿಸಲು ಚುಂಚಶ್ರೀ ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಪಕ್ಷ ಅಧಿಕಾರಕ್ಕೆ ಬರಲು ವಹಿಸಿದ ಜವಾಬ್ದಾರಿಯನ್ನು ಗುರುತಿಸಿ ಆದ್ಯತೆ ನೀಡಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.



ತಾಲ್ಲೂಕಿನ ಕುಂದೂರು ಮಠದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ರಾಜಕಾರಣದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ನೋಡುತ್ತಿದ್ದೇನೆ. ಒಕ್ಕಲಿಗ ಸಮುದಾಯದ ಭಕ್ತರು, ಮುಖಂಡರು ಡಿ.ಕೆ. ಶಿವಕುಮಾರ್ ಅವರಿಗೆ ಪ್ರಾಮುಖ್ಯತೆ ನೀಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ಸಮುದಾಯದ ನಾಯಕ ಮುಖ್ಯಮಂತ್ರಿ ಆಗಲಿ ಎನ್ನುವುದು ಭಕ್ತರ ಭಾವನೆ. ಸಮುದಾಯ ರಾಜ್ಯವನ್ನಾಳಲು ಹಲವು ನಾಯಕರನ್ನು ನೀಡಿದೆ. ನಮ್ಮವರೇ ಮುಖ್ಯಮಂತ್ರಿಯಾಗುತ್ತಾರೆಂದು 2023ರ ಚುನಾವಣೆಯಲ್ಲಿ ಮತ ನೀಡಿ ಗೆಲ್ಲಿಸಿದ್ದೆವು. ಬದಲಾದ ಸನ್ನಿವೇಶದಲ್ಲಿ ಅವಕಾಶ ಕೈತಪ್ಪಿತು ಎಂದರು.


ಕಾಂಗ್ರೆಸ್ ಹೈ ಕಮಾಂಡ್ ಇದನ್ನೆಲ್ಲ ಪರಿಗಣಿಸಿ ಶಿವಕುಮಾರ್ ಅವರಿಗೆ ಅವಕಾಶ ನೀಡಬೇಕು. ಶಿವಕುಮಾರ್ ಪಕ್ಷಕ್ಕಾಗಿ ಶಿಸ್ತಿನಿಂದ ದುಡಿದಿದ್ದಾರೆ. ಯಾವ ಸಂದರ್ಭದಲ್ಲೂ ಪಕ್ಷ ನಿಷ್ಠೆ ಮರೆತಿಲ್ಲ. ಎಷ್ಟೋ ನೋವು ಎದುರಾದರೂ ಏಕಾಂಗಿಯಾಗಿ ಹೋರಾಡಿದವರು. ಆದಷ್ಟು ಬೇಗ ಅವರು ಮುಖ್ಯಮಂತ್ರಿಯಾಗಬೇಕು ಎನ್ನುವುದು ಮಠದ ಭಕ್ತರ ಅಪೇಕ್ಷೆ ಎಂದರು.

ಶಿವಕುಮಾರ್ ಅವರು ಹುಟ್ಟು ಹೋರಾಟಗಾರ. ಯಾವ ಸಂದರ್ಭದಲ್ಲಿ ಏನು ಮಾಡಬೇಕೆಂಬುದು ಅವರಿಗೆ ಗೊತ್ತಿದೆ. ರಾಷ್ಟ್ರಾದ್ಯಂತ ಹೋರಾಟ ಮಾಡಿರುವ ಅವರಿಗೆ ರಾಜಕೀಯ ಒಳಸುಳಿ ಗೊತ್ತಿರುತ್ತದೆ. ಹಲವು ದಿನಗಳಿಂದ ರಾಜ್ಯ ರಾಜಕಾರಣ ಭಿನ್ನ ದಿಕ್ಕಿನಲ್ಲಿ ಸಾಗುತ್ತಿದೆ.

ರಾಜಕೀಯ ಸ್ಥಿರತೆ ಇಲ್ಲದಿದ್ದರೆ ಅಭಿವೃದ್ಧಿ ಮೇಲೆ ಪರಿಣಾಮ ಬೀರುತ್ತದೆಂದರು.

ಪಕ್ಷದ ಮೇಲಿನ ಪ್ರೀತಿಯಿಂದ ಅತ್ಯಂತ ಮುತುವರ್ಜಿ ಹಾಗು ಪ್ರೀತಿಯಿಂದ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಆದಷ್ಟು ಬೇಗ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಕೈಗೊಳ್ಳಬೇಕೆಂದು ಶ್ರೀಗಳು ಕಿವಿಮಾತು ಹೇಳಿದರು.

## ಕಾಡಾನೆ ದಾಳಿಯಿಂದ ಪಾರಾದ ವ್ಯಕ್ತಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಬೆಳಗಿನ ಜಾವ ತೋಟಕ್ಕೆ ಹೋಗುತ್ತಿದ್ದ ವ್ಯಕ್ತಿಯ ಮೇಲೆ ಕಾಡಾನೆ ದಾಳಿ ನಡೆಸಿ ಸ್ಕೂಟಿಯನ್ನು ತುಳಿದು ಹಾಳು ಮಾಡಿದ ಘಟನೆ ಬೂಮರಹಳ್ಳಿಯಲ್ಲಿ ನಡೆದಿದೆ.

ತಾಲ್ಲೂಕಿನ ಹೆತ್ತೂರು ಹೋಬಳಿ ಕುರಬತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಬೂಮರಹಳ್ಳಿ ನಾಗೇಶ್ ಎಂಬುವರು ಬೆಳಗಿನ ಜಾವ ತೋಟಕ್ಕೆ ತಮ್ಮ ಸ್ಕೂಟಿಯಲ್ಲಿ ತೆರಳುತ್ತಿದ್ದಾಗ ಏಕಾಏಕಿ ದಾಳಿ ಮಾಡಲು ಬಂದ ಕಾಡಾನೆಯಿಂದ ತಪ್ಪಿಸಿಕೊಂಡು ಓಡಿದ್ದಾರೆ. ಸಿಟ್ಟಲ್ಲಿದ್ದ ಕಾಡನೆ ನಾಗೇಶ್ ಅವರ ಸ್ಕೂಟಿಯನ್ನು ತುಳಿದು ಹಾನಿ ಮಾಡಿದೆ.

ಈ ಭಾಗದಲ್ಲಿ ಬೀಡು ಬಿಟ್ಟಿರುವ ಕಾಡಾನೆಯನ್ನು ಕಾಡಿಗೆ ಓಡಿಸಬೇಕೆಂದು ಗ್ರಾಮಸ್ಥರು ಈ ಮೂಲಕ ಆಗ್ರಹಿಸಿದ್ದಾರೆ.

## ಪ್ರಜಾಪ್ರಭುತ್ವ ಕಾಯುವ ಏಕೈಕ ಗ್ರಂಥ ಸಂವಿಧಾನ: ಸಿಮೆಂಟ್ ಮಂಜು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ : ಸಂವಿಧಾನ ದಿನದ ಅಂಗವಾಗಿ ಶಾಸಕ ಸಿಮೆಂಟ್ ಮಂಜು ಅವರು ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಬುಧವಾರ ಮಾಲಾರ್ಪಣೆ ನೆರವೇರಿಸಿದರು.



ನಂತರ ಮಾತನಾಡಿದ ಅವರು,ಭಾರತದ ಸಂವಿಧಾನವು ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯ ಒದಗಿಸಿದ ವಿಶ್ವದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದಾಗಿದ್ದು, ಸಂವಿಧಾನದ ಮಹತ್ವದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಿ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸುವುದರ ಜತೆಗೆ ಅವರ ಸಾಧನೆಯ ಬಗ್ಗೆ ತಿಳಿಸಿ ಕೊಡುವುದು ಭಾರತ ಸಂವಿಧಾನಟಟಿ ದಿನಾಚರಣೆಯ ವಿಶೇಷತೆ ಆಗಿದೆ.

ಸಂವಿಧಾನಟಿ ಪ್ರಜಾಪ್ರಭುತ್ವ ಕಾಯುವ ಏಕೈಕ ಗ್ರಂಥ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು, ಅಸಂವಿಧಾನ ಬರೀ ನ್ಯಾಯಾಲಯಗಳಿಗೆ ಸೀಮಿತವಾಗಿರಬಾರದು. ಸಂವಿಧಾನವು ನಮ್ಮ ಜೀವನ, ನಮ್ಮ ಸಂಸ್ಕಾರಗಳಿಗೆ, ನಮ್ಮ ಭಾವನೆಗಳಿಗೆ ನವಚೈತನ್ಯವನ್ನು ಕೊಡಬಲ್ಲದು. ಅದಕ್ಕಾಗಿ ನಾವು ಅದನ್ನು ಜನಸಾಮಾನ್ಯರ ಹೃದಯಸ್ಪರ್ಶಿಸುವವರೆಗೂ ತೆಗೆದುಕೊಂಡು ಹೋಗಬೇಕುಟಿ ಎನ್ನುವ ಹಿನ್ನೆಲೆಯಲ್ಲಿ, ನವೆಂಬರ್ 26ರ ದಿನವನ್ನು ಆಸಂವಿಧಾನ ದಿವಸಟಿ ಎಂದು ಆಚರಿಸುವ ನಿರ್ಧಾರ ತೆಗೆದುಕೊಂಡರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯರು ಭಾಗವಹಿಸಿ ಸಂವಿಧಾನದ ಮೌಲ್ಯಗಳನ್ನು ಕಾಪಾಡುವ ಸಂಕಲ್ಪ ವ್ಯಕ್ತಪಡಿಸಿದರು.




## ‘ಪಟೇಲ್ ಶಿವಪ್ಪ’ ರಿಗೆ ಅಭಿನಂದನಾ ಸಮಾರಂಭ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನದ ಕನಕ ಭವನದಲ್ಲಿ ಬುಧವಾರ ಜಿಲ್ಲಾ ಮತ್ತು ತಾಲ್ಲೂಕು ಕುರುಬರ ಸಂಘದಿಂದ ಹುಡಾ ಅಧ್ಯಕ್ಷರಾಗಿ ಆಯ್ಕೆಯಾದ ಪಟೇಲ್ ಶಿವಪ್ಪ ಅವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಕಾಗಿನೆಲೆ ಕನಕ ಗುರು ಪೀಠದ ಶ್ರೀ ಶಿವಾನಂದ ಪುರಿ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಕುರುಬರ ಸಂಘದ ಜಿಲ್ಲಾಧ್ಯಕ್ಷ ಸಿದ್ದೇಗೌಡ ರಾಜಘಟ್ಟ ಮತ್ತಿತರರಿದ್ದರು.

# ಬೇಲೂರು ಪಟ್ಟಣದಲ್ಲಿ ಆಟೋ ನಿಲ್ದಾಣದ ಭರವಸೆ

## ಶಾಸಕ ಹೆಚ್.ಕೆ. ಸುರೇಶ್ ಹೇಳಿಕೆ | ಅದ್ದೂರಿ ಕನ್ನಡ ರಾಜ್ಯೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಸಾರ್ವಜನಿಕರಿಗೆ ಸೇವೆ ಒದಗಿಸಲು ಹಗಲಿರುಳು ಶ್ರಮಿಸುವ ಆಟೋ ಚಾಲಕರಿಗೆ ತಮ್ಮ ವಾಹನಗಳನ್ನು ಸುರಕ್ಷಿತವಾಗಿ ನಿಲ್ಲಿಸಿಕೊಳ್ಳಲು ಅನುವಾಗಲಿ ಎಂಬ ಉದ್ದೇಶದಿಂದ ಪಟ್ಟಣದ ವಿವಿಧೆಡೆ 10 ನಿಲ್ದಾಣಗಳ ನಿರ್ಮಿಸಲಾಗುವುದು ಎಂದು ಶಾಸಕ ಹೆಚ್.ಕೆ.ಸುರೇಶ್ ಭರವಸೆ ನೀಡಿದರು.

ಹೊಯ್ಸಳ ಆಟೋ ಚಾಲಕರ ಹಾಗೂ ಮಾಲೀಕರ ಸಂಘದಿಂದ ಆಯೋಜಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ ಮಾತನಾಡಿ, ನಿತ್ಯ ಕನ್ನಡದ ರಾಜರಾಜೇಶ್ವರಿಯನ್ನು ಯಾವುದೇ ಜಾತಿ ಮತ ಬೇಧ ಎನ್ನದೆ ನಿತ್ಯೋತ್ಸವ ರೀತಿಯಲ್ಲಿ ಸ್ಮರಿಸುವ ಏಕೈಕ ಕನ್ನಡಿಗರೆಂದರೆ ಅದು ನಮ್ಮ ಆಟೋ ಚಾಲಕರು. ಅವರ ಶ್ರಮ ನಿಜಕ್ಕೂ ಅವಿಸ್ಮರಣೀಯ. ನಾವು ಸಹ ಅವರ ಜೊತೆಯಲ್ಲಿ ನಿಂತು ಕೈಜೋಡಿಸಬೇಕು ಎಂದರು.

ಆಟೋ ಚಾಲಕರು ಸಮಾಜದ ನಿತ್ಯ ಸೇವಕರು. ಸಾರ್ವಜನಿಕರು ಸುರಕ್ಷಿತವಾಗಿ ಅವರ ಸ್ಥಳಕ್ಕೆ ತಲುಪುತ್ತಾರೆಂದರೆ ಅಲ್ಲಿ ಆಟೋ ಚಾಲಕರ ಸಮಯ ಪ್ರಜ್ಞೆ, ಪ್ರಾಮಾಣಿಕತೆ ಹಾಗು ಕಾಳಜಿ ಅಡಗಿರುತ್ತದೆ. ಮಕ್ಕಳು ಶಾಲೆಗೆ ಹೋಗುವಂತೆ, ಮಹಿಳೆಯರು ಸುರಕ್ಷಿತವಾಗಿ ಸಂಚರಿಸುವಂತೆ ಮಾಡುವಲ್ಲಿ ಇವರ ಪಾತ್ರ ಅನನ್ಯ. ಸಮಾಜದಲ್ಲಿ ಅಂತಹವರ ಸೇವೆಗೆ ಗೌರವ ಸಿಗಬೇಕು.

ತಾಲೂಕಿನಲ್ಲಿ ಆಟೋ ಚಾಲಕರಿಗೆ ಬೇಕಾದಷ್ಟು ಸಮರ್ಪಕ ನಿಲ್ದಾಣಗಳ ಕೊರತೆ ಇದೆ. ಜನರ ಸುಗಮ ಪ್ರಯಾಣಕ್ಕೆ, ಚಾಲಕರ ಸುಖಕರ ಸಂಚಾರಕ್ಕೆ 10 ಕಡೆ ಆಟೋ ನಿಲ್ದಾಣಗಳನ್ನು ನಿರ್ಮಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಅನುದಾನವನ್ನು ಈಗಾಗಲೇ ಮೀಸಲಿಟ್ಟು ಸಂಬಂಧಿತ ಇಲಾಖೆಗೆ ಸೂಚನೆ ನೀಡಲಾಗಿದೆ. ಎಲ್ಲ ನಿಲ್ದಾಣಗಳಿಗೂ ಕುಡಿಯುವ ನೀರು, ನೆರಳು, ಸೂಚನಾ ಫಲಕ, ಸಿಸಿಟಿವಿ, ವ್ಯವಸ್ಥಿತ ನಿಲುಗಡೆ ಇತ್ಯಾದಿ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದರು.

ಆರೋಗ್ಯ ಮಾಡಿಸಲು ಮನವಿ:

ಪತ್ರಕರ್ತರ ಸಂಘದ ಕಾರ್ಯದರ್ಶಿ ಬಿ.ಬಿ. ಶಿವರಾಜು ಮಾತನಾಡಿ, ಆಟೋ ಚಾಲಕರೆಲ್ಲಾ ಸ್ಥಿತಿವಂತವರಲ್ಲ. ಈ ಒಂದು ಅವರ ಸೇವೆ ನಾವೆಲ್ಲರೂ ಸೇರಿ ಸ್ಮರಿಸಬೇಕು. ಈಗಾಗಲೇ ಸರ್ಕಾರದಲ್ಲಿ ಆಟೋ ಚಾಲಕರಿಗೆ ಹತ್ತಾರು ಕಲ್ಯಾಣ ಯೋಜನೆಗಳಿದ್ದು ಪ್ರಮುಖವಾಗಿ ಪ್ರತಿಯೊಬ್ಬ ಆಟೋ ಚಾಲಕರಿಗೆ ಅವರಿಗೆ ಒಂದು ವಿಮೆ ಸೌಲಭ್ಯ ಮಾಡಿಕೊಟ್ಟರೆ ಅವರು ಆರ್ಥಿಕ ಕಷ್ಟಗಳಿಗೆ ನೀವು ನೆರವಾದಂತೆ ದಯಮಾಡಿ ಶಾಸಕರು ಇದರ ಬಗ್ಗೆ ಗಮನ ಹರಿಸಿ ಇಂತಹ ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ಮಾಡಿಕೊಡುವಂತೆ ಮನವಿ ಮಾಡಿದರು.

ಸಮಾಜ ಸೇವಕ ಗ್ರಾನೈಟ್ ರಾಜಶೇಖರ್ ಮಾತನಾಡಿ, ಬೇಲೂರಿನ ಸಂಚಾರ ವ್ಯವಸ್ಥೆಯ ಹೃದಯವೇ ಆಟೋ ಚಾಲಕರು. ಜನರು ಬಸ್ ನಿಲ್ದಾಣಕ್ಕೆ ಬರುವುದಾಗಲಿ, ಆಸ್ಪತ್ರೆ, ಶಾಲೆ, ಸರ್ಕಾರಿ ಕಚೇರಿಗಳು ಅಥವಾ ಗ್ರಾಮಾಂತರ ಪ್ರದೇಶಗಳಿಂದ ಪಟ್ಟಣಕ್ಕೆ ಪ್ರಯಾಣಿಸುವುದಾಗಲಿ ಪ್ರತಿ ಕ್ಷಣದಲ್ಲಿ ಜನರ ಜೊತೆ ನಿಂತುಕೊಳ್ಳುತ್ತಿರುವುದು ನಮ್ಮ ಆಟೋ ಚಾಲಕರೇ. ಇವರ ಶ್ರಮಕ್ಕೆ ಸಮಾಜ ತಕ್ಕ ಮಟ್ಟಿಗೆ ಗೌರವ ಕೊಡಬೇಕಾದ ಸಮಯ ಬಂದಿದೆ ಕನ್ನಡದ ಬಗ್ಗೆ ತಾತ್ಸಾರ ಮನೋಭಾವ ಇಲ್ಲದೆ ಕನ್ನಡದ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಇವರಿಗೆ ಸರ್ಕಾರದ ಸವಲತ್ತುಗಳು ಸಿಗುವಂತಾಗಲಿ ಎಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ. ನಾಗರಾಜು ಮಾತನಾಡಿ, ಆಟೋ ಚಾಲಕರು ನಮ್ಮ ಹೊಯ್ಸಳ ರಾಯಭಾರಿಗಳು. ಬೇಲೂರು ಪಟ್ಟಣದಲ್ಲಿ ಪ್ರತಿದಿನ ಸಾವಿರಾರು ಪ್ರವಾಸಿಗರು ಪಟ್ಟಣಕ್ಕೆ ಬಂದಾಗ ಅವರಿಗೆ ಮಾಹಿತಿ ಕಣಜ ನೀಡುವುದಲ್ಲದೆ ಸಂಚಾರಕ್ಕೆ ನೆರವಾಗುತ್ತಿರುವುದು ಆಟೋ ಚಾಲಕರ ಪರಿಶ್ರಮ. ಸಮಾಜದ ನಡೆ ನುಡಿಯಲ್ಲಿ ಇವರ ಪಾತ್ರ ಅಳಿಸದ ಗುರುತು ಮೂಡಿಸುತ್ತದೆ. ಪ್ರತಿಯೊಬ್ಬರಿಗೂ ತಲುಪುವ ಮೂಲಭೂತ ಸೇವೆ ಎಂದರೆ ಸಂಚಾರಅದು ಆಟೋ ಚಾಲಕರ ಮೂಲಕವೇ ಸಾಧ್ಯವಾಗುತ್ತಿದೆ. ಇಂತಹ ಚಾಲಕರಿಗೆ ನಾವು ಸಹ ಅವರಿಗೆ ಆರ್ಥಿಕ ಸಹಾಯ ನೀಡಲು ಬದ್ಧ ಎಂದರು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಭರತನಾಟ್ಯ ಕಲಾವಿದೆ ಅನನ್ಯಾ ಅವರಿಗೆ ನಾಟ್ಯ ಶಾಂತಲೆ ಹಾಗೂ ಶಾಸಕ ಹೆಚ್.ಕೆ. ಸುರೇಶ್, ಎಂ.ಎ. ನಾಗರಾಜ್, ರಾಜಶೇಖರ್, ಬಿ.ಬಿ. ಶಿವರಾಜ್, ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಹಾಗೂ ಪೈಂಟ್ ರವಿ ಅವರನ್ನು ಅಭಿನಂದಿಸಲಾಯಿತು.

ತಹಶಿಲ್ದಾರ್ ಶ್ರೀಧರ್ ಕಂಕಣವಾಡಿ, ವೃತ್ತ ನಿರೀಕ್ಷಕ ರೇವಣ್ಣ, ಪಿಎಸ್‌ಐಎಸ್ ಜಿ. ಪಾಟೀಲ್, ಆಟೋ ಚಾಲಕರ ಸಂಘದ ಅಧ್ಯಕ್ಷ ದೀಪು, ಉಪಾಧ್ಯಕ್ಷ ಶೌಕತ್, ಕರವೇ ಭೋಜೇಗೌಡ, ಚಂದ್ರಶೇಖರ, ತೀರ್ಥಂಕರ್, ಅಂಬರೀಶ್, ಕರ್ಣ, ಜಗದೀಶ್, ಗೌರವ ಅಧ್ಯಕ್ಷ ಪುಟ್ಟರಾಜು, ಕಾರ್ಯದರ್ಶಿ ರವೀಶ್, ಹರೀಶ್, ರಘು, ಮಂಜುನಾಥ್, ಪುನೀತ್ ಇತರರಿದ್ದರು.

# ಇಂದು ಶ್ರೀ ರಾಮಸೇನೆ ಪದಾಧಿಕಾರಿಗಳ ಪದಗ್ರಹಣ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶ್ರೀ ರಾಮಸೇನೆ ರಾಜ್ಯಾಧ್ಯಕ್ಷ ಪ್ರಮೋದ್ ಮುತ್ತಾಲಿಕ್ ಹಾಗೂ ನೂತನ ರಾಜ್ಯ ತಂಡಕ್ಕೆ ಅಭಿನಂದನಾ, ಜಿಲ್ಲಾ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ನ.27ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀರಾಮ ಸೇನೆ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಜಾನೆಕೆರೆ ಹೇಮಂತ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಮೋದ್ ಮುತ್ತಾಲಿಕ್ ಅವರ 70 ವರ್ಷಗಳ ಹಿಂದುತ್ವ ತಪಸ್ಸಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ಸತ್ಕಾರವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಗಣಪತಿ ಮಂಡಳಿಯ ಸದಸ್ಯರು ಹಾಗೂ ಹಿಂದು ಮುಖಂಡರೆಲ್ಲನ್ನು ಆಹ್ವಾನಿಸಲಾಗಿದೆ ಎಂದರು.

ಕಾರ್ಯಕ್ರಮವನ್ನು ಶಾಸಕ ಹೆಚ್.ಪಿ.ಸ್ವರೂಪ್ ಉದ್ಘಾಟಿಸುವರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣೇಗೌಡ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಮಾಜಿ ಮೇಯರ್ ಗಿರೀಶ್ ಚನ್ನವೀರಪ್ಪ, ಹಿಂದು ಸಮಾಜ ಮುಖಂಡ ಬಿ.ಎಂ.ಭುವನಾಕ್ಷ, ಲತೇಶ್ ಕುಮಾರ್ ಸೇರಿ ಹಲವರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಶ್ರೀರಾಮ್ ಸೇನೆಯ ಮುಖಂಡರಾದ ಧರ್ಮನಾಯಕ್, ದರ್ಶನ್, ದೇವರಾಜ್, ವಿನಯ್ ಕೆರೇಹಳ್ಳಿ, ಜಗದೀಶ್, ಮಹೇಶ್ ಹಾಜರಿದ್ದರು.

# ಅಕ್ರಮ ಮಂಜೂರಾತಿ ವಜಾಗೊಳಿಸುವಂತೆ ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಗರ್ ಹುಕುಂ ಯೋಜನೆಯಡಿ ಸಕಲೇಶಪುರ ತಾಲ್ಲೂಕಿನ ಯಡೇಹಳ್ಳಿ ಗ್ರಾಮದಲ್ಲಿ ಹೊರಗಿನವರಿಗೆ ಅಕ್ರಮವಾಗಿ ಭೂಮಿ ಮಂಜೂರು ಮಾಡಲಾಗಿದೆ ಎಂದು ಜಿಲ್ಲಾ ಆದಿದ್ರಾವಿಡ ತುಳು ಸಮಾಜ ಸೇವಾ ಸಂಘದ ಅಧ್ಯಕ್ಷ ಬಿ.ಶಂಕರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಹಾಗು ಕೆಲ ಪ್ರಭಾವಿಗಳು ಸುಳ್ಳು ದಾಖಲೆ ಸೃಷ್ಟಿಸಿ, ಸ್ಥಳೀಯರಲ್ಲದ ವ್ಯಕ್ತಿಗೆ ಅನಧಿಕೃತವಾಗಿ ಸರ್ಕಾರಿ ಜಮೀನು ಹಂಚಿಕೆ ಮಾಡಿದ್ದಾರೆ. ಈ ಬಗ್ಗೆ ಕೂಡಲೇ ತನಿಖೆ ನಡೆಸಿ ಹೊರಗಿನವರಿಗೆ ನೀಡಿರುವ ಜಮೀನನ್ನು ರದ್ದು ಪಡಿಸದಿದ್ದರೆ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಕಂದಾಯ ಇಲಾಖೆಯ ಕೆಲ ಅಧಿಕಾರಿಗಳು ಸುಳ್ಳು ದಾಖಲೆ ಸೃಷ್ಟಿಸಿ, ಮಹಾರಾಷ್ಟ್ರ ಮೂಲದ ಇಂದಿರಾ ಬಿ.ಅಮೀನ್ ಎಂಬುವರಿಗೆ ಗ್ರಾಮದ 2 ಎಕರೆ 10 ಗುಂಟೆ ಜಮೀನನ್ನು ಮಂಜೂರು ಮಾಡಿದ್ದಾರೆ. ಇಂದಿರಾ ಅವರು ಕಳೆದ 70 ವರ್ಷಗಳಿಂದ ಮುಂಬೈನಲ್ಲಿ ವಾಸಿಸುತ್ತಿದ್ದು, ಯಡೇಹಳ್ಳಿಯಲ್ಲಿ ವಾಸ, ಆಧಾರ್, ರೇಷನ್ ಕಾರ್ಡ್, ಮತದಾರ ಗುರುತುಪತ್ರ ಯಾವುದೂ ಇಲ್ಲ ಎಂದು ದೂರಿದರು.


ಬೆಳಗೋಡು ಹೋಬಳಿ ಹಳೆಯ ಲೆಕ್ಕಾಧಿಕಾರಿ ಹಾಗೂ ರಾಜ್ಯಸ್ಥ ನಿರೀಕ್ಷಕ ಮೊದಲಾದವರು ನಕಲಿ ದಾಖಲೆ ಸೃಷ್ಟಿಸಿ ಅಕ್ರಮ ಮಂಜೂರಾತಿ ಮಾಡಿದ್ದಾರೆ. ಈ ಅಕ್ರಮದ ಬಗ್ಗೆ ದೂರು ನೀಡಿದರೂ ತಹಶೀಲ್ದಾರ್ ಯಾವುದೇ ಕ್ರಮ ಕೈಗೊಂಡಿಲ್ಲ. ಸದಾನಂದ ಎಂಬುವರು ಉಪವಿಭಾಗಾಧಿಕಾರಿಗೆ ದೂರು ಸಲ್ಲಿಸಿದ್ದು, ಎಸಿ ಅವರು ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಹಿಂದೆಯೇ ತಹಶೀಲ್ದಾರ್‌ಗೆ ಆದೇಶ ನೀಡಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಿದರು.

ಬಗರ್ ಹುಕುಂ ಸಮಿತಿಗೆ ಸುಳ್ಳು ಮಾಹಿತಿ ನೀಡಿ ಮಾಡಿಸಿರುವ ಮಂಜೂರಾತಿಗೆ ತಕ್ಷಣ ತನಿಖೆ ನಡೆಸಬೇಕು. ಅಕ್ರಮ ಮಂಜೂರಾತಿ ವಜಾ ಮಾಡಿ ಸರ್ಕಾರದ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಹಿಂತೆಗೆದುಕೊಳ್ಳಬೇಕು. ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ತಹಶೀಲ್ದಾರ್ ಅವರನ್ನು ಅಮಾನತು ಮಾಡದಿದ್ದರೆ, ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಸಂಘದ ತಾಲ್ಲೂಕು ಅಧ್ಯಕ್ಷ ನಾರಾಯಣ, ಜಿಲ್ಲಾ ಸಂಚಾಲಕ ಸೋಮಶೇಖರ್, ಜಿಲ್ಲಾ ಸದಸ್ಯ ಸೀನಪ್ಪ, ತಾಲ್ಲೂಕು ಕಾರ್ಯದರ್ಶಿ ದಿನೇಶ್ ಇದ್ದರು.

# ಕುಷ್ಠ ರೋಗ ಮುಕ್ತ ಜಿಲ್ಲೆಯಾಗಿಸಲು ಸಹಕರಿಸಿ: ಡಾ. ವಿಜಯ್ ಗೊರೂರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಆರೋಗ್ಯ ಇಲಾಖೆಯ ಸಿಬ್ಬಂದಿ ಕುಷ್ಠರೋಗ ಪ್ರಕರಣ ಪತ್ತೆಯ ಸಮೀಕ್ಷೆಗೆಂದು ಬಂದ ಸಂದರ್ಭದಲ್ಲಿಅವರಿಗೆ ಪೂರ್ಣ ಸಹಕಾರ ನೀಡಿ ಹಾಸನವನ್ನು ಕುಷ್ಠರೋಗ ಮುಕ್ತ ಜಿಲ್ಲೆಯನ್ನಾಗಿಸಲು ಸಹಕಾರ ನೀಡಬೇಕೆಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ವಿಜಯ್ ಗೊರೂರು ತಿಳಿಸಿದರು.


ನಗರದ ಎಂ.ಕೃಷ್ಣ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ಕುಷ್ಠ ರೋಗ ಪ್ರಕರಣ ಪತ್ತೆ ಹಚ್ಚುವ ಆಂದೋಲನ ಕಾರ್ಯಕ್ರಮಕ್ಕೆ ಹಸಿರು ಬಾವುಟ ತೋರಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿ, 24-11-2025ರಿಂದ 09-12-2025ರ ವರೆಗೆ ತಾಲ್ಲೂಕಿನ ಆಯ್ದ 13 ಪ್ರದೇಶಗಳಲ್ಲಿ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಆಂದೋಲನ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡಿದ್ದು, ಒಟ್ಟು 6 ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಉಳಿದ 3 ನಗರ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿದ್ದು ಇಂದಿನಿಂದ ಆಶಾಕಾರ್ಯಕರ್ತೆಯರು ಮತ್ತು ಪುರುಷ ಸ್ವಯಂ ಸೇವಕರು, ತಾಲ್ಲೂಕು ಮೇಲ್ವಿಚಾರಕರು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಮತ್ತು ತಾಲ್ಲೂಕು ಆರೋಗ್ಯಾಧಿಕಾರಿಗಳು, ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಮೇಲ್ವಿಚಾರಕರು ಮತ್ತು ವೈದ್ಯಾಧಿಕಾರಿಗಳು ಈ ಪ್ರದೇಶಗಳ ಮನೆಗಳಿಗೆ ಭೇಟಿ ನೀಡಿ ಕುಷ್ಠರೋಗದ ಕುರಿತಾದ ಸಮೀಕ್ಷೆ ನಡೆಸುವರು ಎಂದರು.

ಅಧ್ಯಕ್ಷತೆ ವಹಿಸಿದ್ದ ಎಂ.ಕೃಷ್ಣ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಸೈಯದ್ ಮುದಾಸಿರ್ ಮೊಹಮ್ಮದ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಾಸನ ನಗರಕ್ಕೆ ಕೆಲಸ ಅರಸಿ ಬರುವ ವಲಸಿಗರ ಸಂಖ್ಯೆ ಹೆಚ್ಚಿದ್ದು ಸಾಕಷ್ಟು ಮಂದಿ ಈಶಾನ್ಯ ರಾಜ್ಯಗಳಿಂದ, ಬಿಹಾರ, ಉತ್ತರ ಪ್ರದೇಶ ಮತ್ತು ಒಡಿಶಾ ರಾಜ್ಯಗಳಿಂದ ಕಟ್ಟಡ ಮತ್ತುಇತರೆ ಕೂಲಿ ಕೆಲಸಗಳಿಗಾಗಿ ವಲಸೆ ಬರುತ್ತಿದ್ದು ಅವರಿಗೆ ಆರೋಗ್ಯ ಸೇವೆ ಒದಗಿಸುವುದು ನಮಗೆ ಸವಾಲಾಗಿದೆ. ನಮ್ಮಲ್ಲಿ ಬರುವಂತಹ ಕುಷ್ಠರೋಗ ಪ್ರಕರಣಗಳಲ್ಲಿ ಹೆಚ್ಚಿನ ಪ್ರಕರಣಗಳು ಹೊರ ರಾಜ್ಯದಾಗಿರುತ್ತವೆ ಎಂದು ತಿಳಿಸಿದರು. ಜಿಲ್ಲಾ ಕುಷ್ಠ ರೋಗ ನಿಯಂತ್ರಣಾಧಿಕಾರಿ ಡಾ. ನಾಗೇಶ್ ಆರಾಧ್ಯ ಮಾತನಾಡಿ, ಕುಷ್ಠರೋಗದ ಕುರಿತಂತೆ ಮೊದಲಿನಿಂದಲೂ ಮೂಢನಂಬಿಕೆಗಳಿದ್ದು, ಈ ಖಾಯಿಲೆಯು ಯಾವುದೋ ಜನ್ಮದ ಪಾಪದ ಫಲವಾಗಿದೆ ಎಂದು ಈಗಲೂ ಭಾವಿಸುತ್ತಾರೆ. ಮೈಕೊಬ್ಯಾಕ್ಟೀರಿಯಂ ಲೆಪ್ರೆ ಎಂಬ ರೋಗಾಣುವಿನಿಂದ ಈ ಖಾಯಿಲೆ ಹರಡುವುದು, ಆರಂಭಿಕ ಹಂತದಲ್ಲೆ ಪತ್ತೆ ಹಚ್ಚಿಚಿಕಿತ್ಸೆ ನೀಡುವುದರಿಂದ ಈ ಖಾಯಿಲೆ ಬೇರೆಯವರಿಗೆ ಹರಡುವುದನ್ನುತಪಿಸಬಹುದಲ್ಲದೆ, ಖಾಯಿಲೆಯಿಂದ ಬಳಲುವವರ ಅಂಗವಿಕಲತೆಯನ್ನು ಕೂಡತಡೆಯಬಹುದಾಗಿರುವುದರಿಂದ ಮತ್ತು ಮುಂಬರುವ ವರ್ಷಗಳಲ್ಲಿ ಹಾಸನವನ್ನು ಕುಷ್ಠರೋಗ ಮುಕ್ತ ಜಿಲ್ಲೆಯನ್ನಾಗಿಸುವ ಗುರಿಯಿಂದಾಗಿ ಈ ಸಮೀಕ್ಷೆ ನಡೆಸಲಾಗುತ್ತಿದೆ ಎಂದರು.

ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಅಪ್ಪಾಜಿಗೌಡ, ಮಧು, ಕೆ.ಕೆ. ರಾಜೇಶ ಇತರರಿದ್ದರು.

# ಶಿವಾನಂದ ಪುರಿ ಶ್ರೀಗೆ ಅವಮಾನ ಸಿಎಂ ಗಮನಕ್ಕೆ ತರಲು ನಿರ್ಧಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕನಕದಾಸ ಜಯಂತಿಯಲ್ಲಿ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಕಾಗಿನೆಲೆ ಕನಕ ಗುರುಪೀಠದ ಶ್ರೀ ಶಿವಾನಂದ ಪುರಿ ಸ್ವಾಮೀಜಿ ಮಾತನಾಡುತ್ತಿದ್ದ ವೇಳೆ ಮೈಕ್ ಕಿತ್ತುಕೊಂಡು ಅವಮಾನ ಮಾಡಿದ್ದು ಕೂಡಲೇ ಸಮಾಜ ಹಾಗೂ ಶ್ರೀಗಳ ಕ್ಷಮೆಯಾಚಿಸಬೇಕು. ಡಿ. 6 ರಂದು ಹಾಸನಕ್ಕೆ ಭೇಟಿ ನೀಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ಈ ವಿಚಾರ ತರಲಾಗುವುದು ಎಂದು ಒಬಿಸಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಂಗಳಾಪುರ ನಾಗರಾಜ್ ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಗಂಡಸಿ ಹೋಬಳಿ ಗಂಗೆಮಡು ಸನ್ನಿಧಿಯಲ್ಲಿರುವ ಗಂಗಾಧರೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಜನಪರ ಕೆಲಸ ಮಾಡಲು 50 ಲಕ್ಷ ರೂ. ನೀಡುವುದಾಗಿ ಚುನಾವಣಾ ವೇಳೆ ಶಾಸಕರು ಭರವಸೆ ನೀಡಿದ್ದರು. ಆದರೆ ಇದುವರೆಗೆ ಕಾರ್ಯರೂಪಕ್ಕೆ ಬಂದಿಲ್ಲ. ಸಭೆ, ಸಮಾರಂಭದಲ್ಲಿ ಸುಳ್ಳು ಹೇಳುವುದು ಸರಿಯಲ್ಲವೆಂದು ಸ್ವಾಮೀಜಿ ಹೇಳುತ್ತಿದ್ದಾಗ ದಿಢೀರನೇ ಬಂದ ಶಾಸಕರು ಮೈಕ್ ಕಸಿದು ಅವಮಾನಿಸಿದ್ದಾರೆ ಎಂದರು.

ವಿಧಾನಸಭಾ ಚುನಾವಣೆಯಲ್ಲಿ ಸತತ ನಾಲ್ಕು ಬಾರಿ ಗೆಲವು ಸಾಧಿಸಲು ಕುರುಬ ಸಮುದಾಯ ದೊಡ್ಡ ಕೊಡುಗೆ ನೀಡಿದೆ. ಸಮಾಜ ಬಾಂಧವರು ಅರ್ಥ ಮಾಡಿಕೊಳ್ಳಬೇಕು. ಶ್ರೀಗಳಿಗೆ ಅವಮಾನ ಮಾಡಿದ ಶಾಸಕರು ಕೂಡಲೇ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಹೋರಾಟಕ್ಕೆ ಕರೆ ಕೊಡಲಾಗುವುದೆಂದು ಎಚ್ಚರಿಕೆ ನೀಡಿದರು.

ಐತಿಹಾಸಿಕ ತಾಣ ಗಂಗೆಮಡು ಅಭಿವೃದ್ಧಿಗೆ ನೆರವು ನೀಡುವಂತೆ ನಾನು ಪತ್ರ ಬರೆದಿದ್ದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 10 ಕೋಟಿ ರೂ. ಅನುದಾನ ಮೀಸಲಿರಿಸಿದ್ದು ಮೊದಲ ಹಂತದಲ್ಲಿ ನಾಲ್ಕೂವರೆ ಕೋಟಿ ರೂ.ಬಿಡುಗಡೆಗೆ ಆದೇಶ ಮಾಡಿದ್ದಾರೆ. ಸಣ್ಣ ನೀರಾವರಿ ಇಲಾಖೆ ಮೂಲಕ ಕಾಮಗಾರಿ ನಡೆಸಲು ಅನುವು ಮಾಡಿಕೊಟ್ಟಿದ್ದಾರೆ. ಅದನ್ನು ಸಹಿಸದೆ ಧಾರ್ಮಿಕ ಕಾರ್ಯಕ್ರಮದಲ್ಲಿ ಮನಬಂದಂತೆ ಮಾತನಾಡಿ ಎಲ್ಲರ ಗೌರವಕ್ಕೆ ತರುವ ಕೆಲಸ ಮಾಡಿರುವುದು ಖಂಡನೀಯ. ಶಾಸಕರ ಅಭಿವೃದ್ಧಿ ಕೆಲಸಗಳಿಗೆ ನಾವು ಅಡ್ಡಿಮಾಡುವುದಿಲ್ಲ. ಹಾಗೆಯೇ ಬೇರೆಯವರ ಕಾರ್ಯಗಳಿಗೆ ಅವರೂ ಅಡಚಣೆ ಮಾಡಬಾರದು ಎಂದು ಹೇಳಿದರು.

# ಕಲಾಭವನ ಅಚ್ಚುಕಟ್ಟು ನಿರ್ವಹಣೆಗೆ ಸೂಚನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದಲ್ಲಿರುವ ಕಲಾಭವನವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವುದರ ಮೂಲಕ ಕಲಾಸಕ್ತರ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಮಂಜುನಾಥ್ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಹಾಸನಾಂಬ ಕಲಾಭವನ ನಿರ್ವಹಣೆ ಮತ್ತು ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ವಚ್ಛತೆ ಕಾಪಾಡಲು ಕಸದ ಬುಟ್ಟಿಗಳನ್ನು ಇಡುವಂತೆ ಸೂಚಿಸಿದರಲ್ಲದೆ, ಪ್ಲಾಸ್ಟಿಕ್ ಬಳಕೆ ನಿಷೇಧಿಸಿ, ವಾಹನಗಳ ಕ್ರಮಬದ್ಧ ನಿಲುಗಡೆಗೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಲಾಭವನದ ಹೊರ ಆವರಣಕ್ಕೆ ಬಾಡಿಗೆ ನಿಗದಿಪಡಿಸಲು ಲೋಕೋಪಯೋಗಿ ಇಲಾಖೆಯಿಂದ ದರಪಟ್ಟಿ ಪಡೆಯಬೇಕು. ಭವನದ ಒಳಗೆ ಕಾರ್ಯಕ್ರಮ ನಡೆಯುವ ಸಂದರ್ಭದಲ್ಲಿ ಹೊರಆವರಣದಲ್ಲಿ ಧ್ವನಿವರ್ಧಕ ಅಳವಡಿಸದಂತೆ ಕ್ರಮ ವಹಿಸುವಂತೆ ತಿಳಿಸಿದರಲ್ಲದೆ, ಅನುಪಯುಕ್ತ ವಸ್ತುಗಳ ವಿಲೇವಾರಿಗೆ ಕ್ರಮವಹಿಸಲು ತಿಳಿಸಿದರು.

ಸಾರ್ವಜನಿಕರು ತಮ್ಮ ಅನಿಸಿಕೆಗಳನ್ನು ಬರೆಯಲು ಒಂದು ರಿಜಿಸ್ಟರ್ ಇಡುವಂತೆ ಸೂಚಿಸಿದರಲ್ಲದೆ, ಅನಿಸಿಕೆಗಳನ್ನು ಆಧರಿಸಿ ಕೆಲವು ಮಾರ್ಪಾಡುಗಳನ್ನು ಮಾಡಲು ಸಹಾಯವಾಗುತ್ತದೆ. ಕಲೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ನಗರದ ಕಲಾಭವನಕ್ಕೆ ಸೌಲಭ್ಯ ಒದಗಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಲಾ ಭವನದ ಬಾಡಿಗೆ ಪರಿಷ್ಕರಣೆಗೆ ಶೇ.10 ರಷ್ಟು ಹೆಚ್ಚಳ ಮಾಡಲು ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು, ಜಿಲ್ಲಾಧಿಕಾರಿ ಕಚೇರಿ ಸಹಾಯಕ ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ತಾರಾನಾಥ್, ಕಲಾವಿದ ಗ್ಯಾರಂಟಿ ರಾಮಣ್ಣ ಮತ್ತಿತರರು ಹಾಜರಿದ್ದರು.

# ಸ್ಕಾಲರ್ಸ್ ಶಾಲೆಯಲ್ಲಿ ಸಂವಿಧಾನ ದಿನಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ನನಗರದ ಸ್ಕಾಲರ್ಸ್ ಮತ್ತು The world ಸ್ಕಾಲರ್ಸ್ ಶಾಲೆಯಲ್ಲಿ ಸಂವಿಧಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಲೆಯ ಆಡಳಿತಾಧಿಕಾರಿ ಡಾ. ಎಚ್.ಎನ್. ಚಂದ್ರಶೇಖರ್ ಮಾತನಾಡಿ, ವಿಶ್ವದ ಶ್ರೇಷ್ಠ ಸಂವಿಧಾನ ಎನಿಸಿಕೊಂಡಿರುವ ಭಾರತ ಸಂವಿಧಾನವು ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳನ್ನು ಕಲ್ಪಿಸಿದೆ. ಬಡವ-ಶ್ರೀಮಂತ, ಮೇಲು-ಕೀಳು, ಮಹಿಳಾ ಅಸಮಾನತೆಯನ್ನು ತೊಡೆದು ಹಾಕಿದ ಸಂವಿಧಾನವನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ. ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿಶ್ರಮದ ಫಲವಾಗಿ ದೇಶದ ಪ್ರತಿಯೊಬ್ಬರು ಸ್ವಾತಂತ್ರ್ಯವನ್ನು ಅನುಭವಿಸುವಂತಾಗಿದೆ ಎಂದರು. ಶಾಲೆಯ ವಿದ್ಯಾರ್ಥಿನಿ ಭಾರತೀಯ ಸಂವಿಧಾನದಲ್ಲಿ ಅಳವಡಿಸಲಾಗಿರುವ ಮೌಲ್ಯಗಳು, ಆದರ್ಶಗಳನ್ನು ಒತ್ತಿ ಹೇಳುತ್ತಾ ಈ ದಿನದ ಮಹತ್ವದ ಬಗ್ಗೆ ಸೊಗಸಾಗಿ ಮಾತನಾಡಿದರು. ನಂತರ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂವಿಧಾನ ದಿನಾಚರಣೆಯ ಪ್ರಮಾಣ ವಚನ ಸ್ವೀಕರಿಸಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಸಂವಿಧಾನದ ಮನೋಭಾವವನ್ನು ಎತ್ತಿ ಹಿಡಿಯುವ ಜವಾಬ್ದಾರಿಯುತ ಮತ್ತು ಜ್ಞಾನವಂತ ನಾಗರಿಕರಾಗಲು ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿತು. ಶಾಲೆಯ ಕಾರ್ಯದರ್ಶಿ ಮಮತಾ ಚಂದ್ರಶೇಖರ್, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಇದ್ದರು.

# ಇತಿಹಾಸದಲ್ಲಿ ಈ ದಿನ

## ನವೆಂಬರ್-27

1895: ಅಲ್ಫ್ರೆಡ್ ನೋಬೆಲ್ ತಮ್ಮ ಆಸ್ತಿಯನ್ನು ಮಾನವ ಕಲ್ಯಾಣಕ್ಕಾಗಿ ಬಳಸುವಂತೆ ಉಯಿಲು ಬರೆದರು. ಇದೇ ನಂತರ ನೋಬೆಲ್ ಪ್ರಶಸ್ತಿ ಸ್ಥಾಪನೆಯಾಯಿತು.

1924: ಫೋರ್ಡ್ ಮೋಟರ್ ಕಂಪನಿಯ ಸ್ಥಾಪಕ ಹೆನ್ರಿ ಫೋರ್ಡ್ ಮಾಡೆಲ್ ಟಿ ಕಾರಿನ ಉತ್ಪಾದನೆಯನ್ನು ಅಂತ್ಯಗೊಳಿಸಿದರು.

1971: ಸೋವಿಯತ್ ಯೂನಿಯನ್ ಮಾರ್ಸ್-2 ಯಾನವನ್ನು ಮಂಗಳನ ಮೇಲೆ ಇಳಿಸಲು ಪ್ರಯತ್ನಿಸಿತು.

2005: ಫಸ್ಟ್ ಪಾರ್ಟ್ನರ್‌ಶಿಪ್‌ನಡಿ ಯುರೋಪಿಯನ್ ಯೂನಿಯನ್ ಮತ್ತು ಭಾರತ ಸ್ಟ್ರಾಟೆಜಿಕ್ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿದ ದಿನ.

1701: ಸಿಖ್ ಗುರು ಗೋಬಿಂದ್ ಸಿಂಗ್ ಖಾಲ್ಸಾದ ಯೋಧರನ್ನು ಮೋಗಲ್ ಸೇನೆ ವಿರುದ್ಧ ಗೆಲುವಿಗೆ ಮುನ್ನಡೆಸಿದರು.

2008: ಮುಂಬೈ ಮೇಲೆ 26/11 ದಾಳಿಯ ನಂತರ ಭಾರತದ ಭದ್ರತಾ ವ್ಯವಸ್ಥೆಯನ್ನು ಪುನರ್ ವ್ಯವಸ್ಥಿತಗೊಳಿಸುವ ಬಗ್ಗೆ ತುರ್ತು ಸಭೆಗಳು ಜರುಗಿದ ದಿನ.

1994: ನಾಸಾನ ಸ್ಟೇಷನ್ ಮಿರ್ ಯೋಜನೆಯಡಿ ಅಮೇರಿಕನ್ ಮತ್ತು ಸ್ಟ್ರಾಟೆಜಿಕ್ ಪಾಲದಾರಿಕೆ ನಡುವೆ ಸಹಕಾರಕ್ಕೆ ಹೊಸ ಚಾಲನೆ.

### ಜನನ

1940: ನೈತಿಕ ಕ್ರಾಂತಿ ಚಳವಳಿಯ ಪಿತಾಮಹ ಜ್ಯೋತಿಬಾ ಫುಲೆ ಅವರ ಪತ್ನಿ ಸಾವಿತ್ರಿಬಾಯಿ ಫುಲೆ

1942: ಪ್ರಸಿದ್ಧ ಚಿತ್ರಕಥೆಗಾರ ಹಾಗೂ ಸಾಹಿತಿ ಜವಾಹರ ಕಾಂತೆ

1907: ಜಾಗತಿಕ ಮಟ್ಟದ ಪ್ರಸಿದ್ಧ ಖಗೋಳ ವಿಜ್ಞಾನಿ ಲಿಯೋನರ್ ಜೊನ್ಸ್

### ಮರಣ

1981: ಫುಟ್‌ಬಾಲ್ ಲೆಜೆಂಡ್ ಲೇಮನ್ ಕಿಂಗ್

# 3ನೇ ದಿನವೂ ಮುಂದುವರೆದ ರೈತರ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ಹೆಚ್ಚಿಸುವಂತೆ ಒತ್ತಾಯಿಸಿ ರೈತರು ನಡೆಸುತ್ತಿರುವ ಪ್ರತಿಭಟನೆ 3ನೇ ದಿನವಾದ ಬುಧವಾರವೂ ಜಿಲ್ಲಾಧಿಕಾರಿ ಕಚೇರಿ ಎದುರು ಮುಂದುವರೆಯಿತು.

ಮೆಕ್ಕೆಜೋಳಕ್ಕೆ ಕೇಂದ್ರ ಸರ್ಕಾರ ನಿಗದಿಪಡಿಸಿದ ದರಕ್ಕೂ ಕಡಿಮೆ ಮಾರಾಟವಾಗುತ್ತಿದೆ. ಬೆಲೆ ಕುಸಿತದ ಸಂದರ್ಭದಲ್ಲಿ ಖರೀದಿ ಕೇಂದ್ರ ತೆರೆಯಬೇಕಿದ್ದರೂ, ಇನ್ನೂ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಂಡಿಲ್ಲವೆಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಹಾಸನ ಜಿಲ್ಲೆ ಹೈನುಗಾರಿಕೆಯಲ್ಲಿ ರಾಜ್ಯದಲ್ಲಿ ದ್ವಿತೀಯ ಸ್ಥಾನದಲ್ಲಿದ್ದು, ಪಶು ಆಹಾರಕ್ಕೆ ಅಗತ್ಯವಾಗಿರುವ ಮೆಕ್ಕೆಜೋಳ ಕೆ.ಎಂ.ಎಫ್. ಹೊರ ರಾಜ್ಯಗಳಿಂದ ದಲ್ಲಾಳಿಗಳ ಮುಖಾಂತರ ತರಿಸಿಕೊಳ್ಳುತ್ತಿರುವುದು ದೊಡ್ಡ ಸಮಸ್ಯೆಯಾಗಿದೆ. ರೈತರಿಂದಲೇ ಮೆಕ್ಕೆಜೋಳ ಖರೀದಿ ಮಾಡುವ ಬದಲಿಗೆ ಹೊರಜಿಲ್ಲೆ, ಹೊರ ರಾಜ್ಯಗಳ ಅವಲಂಬನೆ ಮುಂದುವರೆದಿದೆ. ಇದನ್ನು ತಕ್ಷಣ ನಿಲ್ಲಿಸಿ, ಸ್ಥಳೀಯ ರೈತರಿಗೆ ಆದ್ಯತೆಯಾಗಿ ಖರೀದಿ ಪ್ರಾರಂಭಿಸಬೇಕೆಂದು ಆಗ್ರಹಿಸಿದರು.

ರೈತ ಮುಖಂಡ ಕಣಗಾಲ್ ಮೂರ್ತಿ ಅವರು ಮಾತನಾಡಿ, ಅತಿವೃಷ್ಟಿ, ಬರಗಾಲದಿಂದ ತತ್ತರಿಸುತ್ತಿರುವ ರೈತರು, ಇದೀಗ ಕಳಪೆ ಮೆಕ್ಕೆಜೋಳ ಬೀಜದ ಪರಿಣಾಮ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಲಸೋಲ ಮಾಡಿ ಎರಡೆರಡು ಬಾರಿ ಬಿತ್ತನೆ ಮಾಡಿದರೂ, ಬಂಡವಾಳ ವಾಪಾಸ್ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ದಿಕ್ಕುತೋಚದ ರೈತರು ಆತ್ಮಹತ್ಯೆ ಹಾದಿ ತುಳಿಯುತ್ತಿದ್ದಾರೆ ಎಂದು ಆರೋಪಿಸಿದರು.

ರೈತ ಸಂಘದ ರಾಜ್ಯ ಅಧ್ಯಕ್ಷಿಯ ಮಂಡಳಿ ಸದಸ್ಯ ಗ್ಯಾರಂಟಿ ರಾಮಣ್ಣ ಮಾತನಾಡಿ, ರೈತರಿಗೆ ಆತ್ಮಸ್ಥೈರ್ಯ ತುಂಬಿ ರಕ್ಷಣೆ ನೀಡುವುದು ರಾಜ್ಯ ಮತ್ತು ಕೇಂದ್ರ, ಸರ್ಕಾರದ ಕರ್ತವ್ಯವಾಗಿದ್ದರೂ, ಸರ್ಕಾರ ರೈತರ ಸಮಾಧಿಗಳ ಮೇಲೆ ಮಹಲ್ ಕಟ್ಟುವ ನೀತಿ ಅನುಸರಿಸುತ್ತಿದೆ.

ರೈತ ಮುಖಂಡರಾದ ಬಳ್ಳೂರು ಉಮೇಶ್, ಬಿಟ್ಟಗೌಡನಹಳ್ಳಿ ಮಂಜು, ಮರ್ಕುಲಿ ಪ್ರಕಾಶ್, ಬೂವನೇಶ್, ಜಗದೀಶ್, ಶಿವಕುಮಾರ್, ಬೂಮೇಶ್ ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248